ಓ ಎಸ್ ನಂ. 363/2017

ಪಿ ಡಬ್ಲ್ಯೂ-1

ಸಾಕ್ಷಿದಾರರನ್ನು ಕರೆಯಿಸಿ, ಪ್ರಮಾಣವಚನ ಬೋಧಿಸಲಾಯಿತು.

ದಿಃ 18.07.2023

ಪಾಟೀ ಸವಾಲುಃ- ಶ್ರೀ ಡಿ ಪಿ 1 ರಿಂದ 6 ನೇ ಪ್ರತಿವಾದಿ ಪರ ವಕೀಲರಿಂದ

ನಮ್ಮ ಆಸ್ತಿಗೆ ತಂಟೆ ತಕರಾರು ಮಾಡಬಾರದು ಎಂದು ಪ್ರತಿವಾದಿಯರ ವಿರುದ್ಧ ದಾವೆಯನ್ನು ಸಲ್ಲಿಸಿರುತ್ತೇವೆ. ನಮ್ಮ ವಿರುದ್ಧ ಕ್ರಿಮಿನಲ್ ಮೊಕದಮ್ಮೆ ಕೊಡಲಾಗಿದೆ ಎಂದರೆ ಸರಿ. ಸದರಿ ಪ್ರಕರಣವು ವಜಾ ಆಗಿದೆ ಎಂದರೆ ನನಗೆ ಗೊತ್ತಿಲ್ಲ. ದಾವಾಸ್ತಿಯು ಯಾರ ಹೆಸರಿನಲ್ಲಿದೆ ಎಂದು ನನಗೆ ಗೊತ್ತಿಲ್ಲ. ದಾವಾಸ್ತಿಯ ವಿಸ್ತೀರ್ಣ ಎಷ್ಟಿದೆ ಎಂದು ನನಗೆ ಗೊತ್ತಿಲ್ಲ. ದಾವಾಸ್ತಿಯು ಮೂಲತಃ ಯಾರ ಹೆಸರಿನಲ್ಲಿತ್ತು ಎಂದು ನನಗೆ ಗೊತ್ತಿಲ್ಲ. ದಾವಾಸ್ತಿಗಳಿಗೆ ಸಂಬಂಧ ಪಟ್ಟ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ದಾವಾಸ್ತಿಯು ಮಂಜೂರಾದ ಆಸ್ತಿ ಎಂದು ತೋರಿಸಲು ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಪ್ರತಿವಾದಿಯರಿಗೆ ಆಸ್ತಿಯು ಯಾವಾಗ ಮಂಜೂರಾಯಿತು ಎಂದು ನನಗೆ ಗೊತ್ತಿಲ್ಲ. 2 ನೇ ಪ್ರತಿವಾದಿಯ ಆಸ್ತಿಯ ಸರ್ವೆ ನಂಬರ್ 235 ಇರುತ್ತದೆ, ವಿಸ್ತೀರ್ಣ ಎಷ್ಟು ಎಂದು ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿಯ ಆಸ್ತಿಯ ಸರ್ವೆ ನಂಬರ್ ಮತ್ತು ವಿಸ್ತೀರ್ಣ ಗೊತ್ತಿಲ್ಲ. 2 ನೇ ಪ್ರತಿವಾದಿಗೆ ಯಾವ ವರ್ಷದಲ್ಲಿ ಖಾತೆ ಬಂದಿರುತ್ತದೆ ಎಂದು ನನಗೆ ಗೊತ್ತಿಲ್ಲ. 2 ನೇ ಪ್ರತಿವಾದಿಗೆ ಯಾವ ರೀತಿಯಲ್ಲಿ ಖಾತೆ ವರ್ಗಾವಣೆಯಾಗಿರುತ್ತದೆ ಎಂದು ನನಗೆ ಗೊತ್ತಿಲ್ಲ. 2 ನೇ ಪ್ರತಿವಾದಿಗೆ ಆಸ್ತಿ ಬರುವ ಪೂರ್ವದಲ್ಲಿ ಸದರಿ ಆಸ್ತಿಯು ರಾಜಶೆಟ್ಟಿ ಮತ್ತು ನಂಜಶೆಟ್ಟಿ ಅವರ ಹೆಸರಿನಲ್ಲಿತ್ತು. ರಾಜಶೆಟ್ಟಿ ಮತ್ತು ನಂಜಶೆಟ್ಟಿ ಅವರ ಹೆಸರಿನಲ್ಲಿ ಎಷ್ಟು ವಿಸ್ತೀರ್ಣದ ಆಸ್ತಿ ಇತ್ತು ಎಂದು ನನಗೆ ಗೊತ್ತಿಲ್ಲ. ರಾಜಶೆಟ್ಟಿ ಮತ್ತು ನಂಜಶೆಟ್ಟಿ ಅವರ ಹೆಸರಿಗೆ ಯಾವ ವರ್ಷದಲ್ಲಿ ಖಾತೆಯಾಗಿತ್ತು ಎಂದು ನನಗೆ ಗೊತ್ತಿಲ್ಲ. 3 ನೇ ಪ್ರತಿವಾದಿಯ ಹೆಸರಿನಲ್ಲಿ ಆಸ್ತಿ ಇದೆಯೋ ಇಲ್ಲವೋ ನನಗೆ ಗೊತ್ತಿಲ್ಲ. 3 ನೇ ಪ್ರತಿವಾದಿಯು ನಮ್ಮ ಆಸ್ತಿಗೆ ತಂಟೆ ತಕರಾರು ಮಾಡಿದ್ದರಿಂದ ಅವರನ್ನು ಪಕ್ಷಗಾರರನ್ನಾಗಿ ಮಾಡಿರುತ್ತೇವೆ.

4 ನೇ ಪ್ರತಿವಾದಿಯ ಹೆಸರಿನಲ್ಲಿ ಜಮೀನು ಇರುತ್ತದೆ. 4 ನೇ ಪ್ರತಿವಾದಿಯ

ಓ ಎಸ್ ನಂ. 363/2017

ಪಿ ಡಬ್ಲ್ಯೂ-1

ಜಮೀನಿನ ಸರ್ವೆ ನಂಬರ್ 235 ಆಗಿರುತ್ತದೆ. ಎಷ್ಟು ವಿಸ್ತೀರ್ಣದ ಆಸ್ತಿ 4 ನೇ ಪ್ರತಿವಾದಿಯ ಹೆಸರಿನಲ್ಲಿದೆ ಎಂದು ನನಗೆ ಗೊತ್ತಿಲ್ಲ. 4 ನೇ ಪ್ರತಿವಾದಿಗೆ ಯಾವ ರೀತಿಯಲ್ಲಿ ಆಸ್ತಿ ಬಂದಿರುತ್ತದೆ ಎಂದು ನಾನು ತಿಳಿದುಕೊಂಡಿಲ್ಲ. 4 ನೇ ಪ್ರತಿವಾದಿಗೆ ಆಸ್ತಿ ಬರುವ ಪೂರ್ವದಲ್ಲಿ ಸದರಿ ಆಸ್ತಿಯು ಯಾರ ಹೆಸರಿನಲ್ಲಿತ್ತು ಎಂದು ನಾನು ತಿಳಿದುಕೊಂಡಿಲ್ಲ.

5 ನೇ ಪ್ರತಿವಾದಿಯ ಹೆಸರಿನಲ್ಲಿ ಜಮೀನು ಇರುತ್ತದೆಯೋ ಇಲ್ಲವೋ ನನಗೆ ಗೊತ್ತಿಲ್ಲ. 5 ನೇ ಪ್ರತಿವಾದಿಯು ತಂಟೆ ತಕರಾರು ಮಾಡಿದ್ದರಿಂದ ನಾನು ಅವರನ್ನು ಪಕ್ಷಗಾರರನ್ನಾಗಿ ಮಾಡಿರುತ್ತೇನೆ.

6 ನೇ ಪ್ರತಿವಾದಿಯ ಹೆಸರಿನಲ್ಲಿ ಜಮೀನು ಇರುತ್ತದೆಯೋ ಇಲ್ಲವೋ ನನಗೆ ಗೊತ್ತಿಲ್ಲ. 5 ಮತ್ತು 6 ನೇ ಪ್ರತಿವಾದಿಯರು ನಮ್ಮ ಆಸ್ತಿಗೆ ತಂಟೆ ತಕರಾರು ಮಾಡಿರುವುದಿಲ್ಲ.

ಪ್ರಸ್ತುತ ದಾವಾಸ್ತಿಯು ನಮ್ಮ ಹೆಸರಿನಲ್ಲಿದೆ. ನನ್ನ ಹೆಸರಿನಲ್ಲಿರುವ ಪಹಣಿ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ಸದರಿ ಪಹಣಿಯಲ್ಲಿ ಎಷ್ಟು ವಿಸ್ತೀರ್ಣವಿದೆ ಎಂದು ನಾನು ನೋಡಿಲ್ಲ, ಸಾಕ್ಷಿ ಮುಂದುವರೆದು ನನಗೆ ಓದಲು ಬರೆಯಲು ಬರುವುದಿಲ್ಲ. ನನಗೆ ಓದಲು ಬರೆಯಲು ಬರದೇ ಇರುವುದರಿಂದ ನನ್ನ ಮುಖ್ಯವಿಚಾರಣೆ ಪ್ರಮಾಣ ಪತ್ರದಲ್ಲಿ ಏನು ಬರೆದಿದ್ದಾರೆ ಎಂದು ನನಗೆ ಗೊತ್ತಿಲ್ಲ . ನನ್ನ ಮುಖ್ಯವಿಚಾರಣೆ ಪ್ರಮಾಣ ಪತ್ರವನ್ನು ಬರೆಯಲು ನಾನೇ ವಕೀಲರಿಗೆ ಮಾಹಿತಿ ನೀಡಿರುತ್ತೇನೆ.

ದಾವಾಸ್ತಿಯ ಪೂರ್ವಕ್ಕೆ ಸುರೇಶ್, ಪಶ್ಚಿಮಕ್ಕೆ ಕೃಷ್ಣೇಗೌಡ ಮತ್ತು ನಾಗಮ್ಮ, ಉತ್ತರಕ್ಕೆ ರಾಜಶೆಟ್ಟಿ ದಕ್ಷಿಣಕ್ಕೆ ನಂಜೇಗೌಡ. ದಾವೆಯನ್ನು 4 ಎಕರೆ ಆಸ್ತಿಗೆ ಸಂಬಂಧ ಪಟ್ಟಂತೆ ಸಲ್ಲಿಸಿರುತ್ತೇನೆ. ಸದರಿ 4 ಎಕರೆ ಆಸ್ತಿಯು ಪ್ರತ್ಯೇಕ ಪ್ರತ್ಯೇಕ ವಿಸ್ತೀರ್ಣ ಹೊಂದಿದೆ ಎಂದು ದಾವೆ ಸಲ್ಲಿಸಿರುತ್ತೇನೆ. ಸದರಿ ಪ್ರತ್ಯೇಕ ವಿಸ್ತೀರ್ಣವು ಎಷ್ಟೆಷ್ಟಿದೆ ಎಂದು ಹೇಳಲು ಸಾಧ್ಯವಿಲ್ಲ. ಪ್ರತ್ಯೇಕ ವಿಸ್ತೀರ್ಣಕ್ಕೆ ಸಂಬಂಧ ಪಟ್ಟಂತೆ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಸದರಿ ವಿಸ್ತೀರ್ಣವು ಸರ್ವೆ ನಂಬರ್ 235 ಹಾಗೂ 63 ರಲ್ಲಿ ಬರುತ್ತದೆ.

ನನ್ನ ತಾತ ಯಾವ ವರ್ಷದಲ್ಲಿ ತೀರಿಕೊಂಡರು ಎಂದು ನನಗೆ ಗೊತ್ತಿಲ್ಲ. ಸುಮಾರು

ಎಷ್ಟು ವರ್ಷಗಳ ಹಿಂದೆ ಮರಣ ಹೊಂದಿರುತ್ತಾರೆ ಎಂದು ನನಗೆ ನೆನಪಿಲ್ಲ. ಖಾತೆಗಳು ಪ್ರತಿವಾದಿಯರ ಹೆಸರಿಗೆ ಬದಲಾವಣೆಗೊಂಡಿರುತ್ತದೆ ಎನ್ನುವ ವಿಷಯವು ಈಗ್ಗೆ ಸುಮಾರು 5 ವರ್ಷಗಳ ಹಿಂದೆ ಗೊತ್ತಾಗಿರುತ್ತದೆ. ದಾವಾ ಸಲ್ಲಿಸುವ ಸಂದರ್ಭದಲ್ಲಿ ದಾಖಲಾತಿಗಳನ್ನು ಪರಿಶೀಲಿಸಿದಾಗ ದಾವಾಸ್ತಿಯ ದಾಖಲಾತಿಗಳು ಯಾರ ಹೆಸರಿನಲ್ಲಿತ್ತು ಎಂದು ನನಗೆ ಗೊತ್ತಿಲ್ಲ. ದಾವಾ ಸಲ್ಲಿಸುವ ಪೂರ್ವದಲ್ಲಿ ಮತ್ತು ದಾವಾ ಸಲ್ಲಿಸಿದ ನಂತರ ಇಲ್ಲಿಯವರೆಗೂ ಪ್ರತಿವಾದಿಯರ ಹೆಸರಿನಲ್ಲಿಯೇ ಆಸ್ತಿಗಳು ಇರುತ್ತವೆ ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂಬರ್ 63 ರಲ್ಲಿ 6.29 ಎಕರೆ ಪೈಕಿ 4 ಎಕರೆ ನಂಜಶೆಟ್ಟಿ ಬಿನ್ ಲಕ್ಕಶೆಟ್ಟಿ ಅವರ ಹೆಸರಿನಲ್ಲಿ ಮಂಜೂರಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ಸದರಿ ಆಸ್ತಿಗಳನ್ನೇ ಪ್ರತಿವಾದಿಯರು ತಮ್ಮ ಒಟ್ಟು ಕುಟುಂಬದಲ್ಲಿ ವಿಭಾಗ ಮಾಡಿಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ವಿಭಾಗದ ಮೂಲಕ ತಮ್ಮ ತಮ್ಮ ಹಿಸ್ಸೆಗೆ ಬಂದ ಆಸ್ತಿಯನ್ನು ಪ್ರತ್ಯೇಕವಾಗಿ ಸ್ವಾಧೀನಾನುಭವ ಹೊಂದಿ ಅನುಭವಿಸಿಕೊಂಡು ಬರುತ್ತಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

1 ನೇ ಪ್ರತಿವಾದಿಯ ಹೆಸರಿನಲ್ಲಿ ಸರ್ವೆ ನಂಬರ್ 235/1 ರಲ್ಲಿ 36 ಗುಂಟೆ ಆಸ್ತಿಯಿದೆ ಎಂದರೆ ನನಗೆ ಗೊತ್ತಿಲ್ಲ. ಸದರಿ 36 ಗುಂಟೆ ಜೊತೆಗೆ 2 ಗುಂಟೆ ಕರಾಬು ಆಸ್ತಿಯನ್ನು ಅನುಭವಿಸಿಕೊಂಡು ಬರುತ್ತಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. 2 ನೇ ಪ್ರತಿವಾದಿಯ ಹೆಸರಿನಲ್ಲಿ ಸರ್ವೆ ನಂಬರ್ 235/2 ರಲ್ಲಿ 36 ಗುಂಟೆ ಆಸ್ತಿ ಮತ್ತು ಒಂದುವರೆ ಗುಂಟೆ ಕರಾಬುಯಿದೆ ಎಂದರೆ ನನಗೆ ಗೊತ್ತಿಲ್ಲ. 3 ನೇ ಪ್ರತಿವಾದಿಯ ಹೆಸರಿನಲ್ಲಿ ಸರ್ವೆ ನಂಬರ್ 235/3 ರಲ್ಲಿ 36 ಗುಂಟೆ ಆಸ್ತಿ ಮತ್ತು 4 ಗುಂಟೆ ಕರಾಬುಯಿದೆ ಎಂದರೆ ನನಗೆ ಗೊತ್ತಿಲ್ಲ. 5 ನೇ ಪ್ರತಿವಾದಿಯ ಹೆಸರಿನಲ್ಲಿ ಸರ್ವೆ ನಂಬರ್ 235/5 ರಲ್ಲಿ 18 ಗುಂಟೆ ಆಸ್ತಿ ಮತ್ತು ನಾಲ್ಕುಕಾಲು ಗುಂಟೆ ಕರಾಬುಯಿದೆ ಎಂದರೆ ನನಗೆ ಗೊತ್ತಿಲ್ಲ. 4 ನೇ ಪ್ರತಿವಾದಿಯ ಹೆಸರಿನಲ್ಲಿ ಸರ್ವೆ ನಂಬರ್ 235/4 ರಲ್ಲಿ 18 ಗುಂಟೆ ಆಸ್ತಿ ಮತ್ತು ನಾಲ್ಕುಕಾಲು ಗುಂಟೆ ಕರಾಬುಯಿದೆ ಎಂದರೆ ನನಗೆ ಗೊತ್ತಿಲ್ಲ. ಈ ಎಲ್ಲಾ ಆಸ್ತಿಗಳು ಮೂಲತಃ ಸರ್ವೆ ನಂಬರ್ 63 ಆಗಿತ್ತು ಎಂದರೆ ನನಗೆ ಗೊತ್ತಿಲ್ಲ.

ನಿ ಪಿ 1 ರಲ್ಲಿ 1.09 ಎಕರೆ ಆಸ್ತಿಯು ನನ್ನ ಮತ್ತು 2 ನೇ ವಾದಿಯ ಹೆಸರಿನಲ್ಲಿ ಜಂಟಿ ಹೆಸರಿನಲ್ಲಿದೆ ಎಂದರೆ ಸರಿ. ನಿ ಪಿ 1 ಕ್ಕೂ ಮತ್ತು ದಾವಾಸ್ತಿಗೂ ಯಾವುದೇ

ಸಂಬಂಧವಿಲ್ಲವೆಂದರೆ ಸರಿಯಲ್ಲ. ನಿ ಪಿ 1 ರಲ್ಲಿರುವ ವಿಸ್ತೀರ್ಣಕ್ಕೂ ಮತ್ತು ದಾವಾ ಶೆಡ್ಯೂಲ್ ಆಸ್ತಿಯ ವಿಸ್ತೀರ್ಣಕ್ಕೂ ವ್ಯತ್ಯಾಸವಿದೆ ಎಂದರೆ ನನಗೆ ಗೊತ್ತಿಲ್ಲ. ನಾನು ದಾವಾದಲ್ಲಿ ಕೇಳಿರುವ ಪರಿಹಾರಕ್ಕೆ ಸಂಬಂಧ ಪಟ್ಟಂತೆ ಯಾವುದೇ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲವೆಂದರೆ ಸರಿಯಲ್ಲ. ಪ್ರತಿವಾದಿಯರು ಯಾವುದೇ ತಂಟೆ ತಕರಾರು ಮಾಡದೇ ಇದ್ದರೂ ಸಹ ಸುಳ್ಳು ದಾವೆಯನ್ನು ಸಲ್ಲಿಸಿರುತ್ತೀರಾ ಎಂದರೆ ಸಾಕ್ಷಿಯು ಪ್ರತಿವಾದಿಯರು ನಮ್ಮ ಮನೆಯ ಹತ್ತಿರ ಬಂದು ಹಲ್ಲೆ ಮಾಡಿದ್ದರಿಂದ ಸದರಿ ದಾವೆಯನ್ನು ಸಲ್ಲಿಸಿರುತ್ತೇನೆ ಎಂದು ನುಡಿಯುತ್ತಾರೆ.

**ಮರುವಿಚಾರಣೆಃ** ಇಲ್ಲ .

(ಮುಕ್ತ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಸ.ಇ.ಎ.ಒ.,

ಸಹಿ/-

3 ನೇ ಅಧಿಕ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
ಚನ್ನರಾಯಪಟ್ಟಣ.